# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 24395/2017

| | |
|---|---|
| ಸಾಕ್ಷಿದಾರರ ಹೆಸರು : | ಶ್ರೀನಿವಾಸ ಎಸ್. |
| ತಂದೆಯ ಹೆಸರು : | ಸಿದ್ದೇಗೌಡ |
| ವಯಸ್ಸು : | 46 ವರ್ಷ |
| ಉದ್ಯೋಗ : | ಪೊಲೀಸ್ ಮುಖ್ಯ ಪೇದೆ, ತಿಲಕ್ ನಗರ ಪಿ.ಎಸ್. |
| ವಾಸ : | ತಲಘಟಪುರ, ಬೆಂಗಳೂರು. |

**ದಿನಾಂಕ 13/02/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ಜುಲೈ-2022 ರಿಂದ ಇಲ್ಲಿಯವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ 1, 3 ಮತ್ತು 5 ನೇ ಆರೋಪಿತರ ವಿರುದ್ದ ಉದ್ಘೋಷಣೆ ಮಾಡುವಂತೆ ನ್ಯಾಯಾಲಯದಿಂದ ಆದೇಶ ಬಂದಿದ್ದು. ಠಾಣಾಧಿಕಾರಿಯವರು ಉದ್ಘೋಷಣೆ ಮಾಡುವಂತೆ ನನಗೆ ನಿಯೋಜಿಸಿರುತ್ತಾರೆ.

2. ಅದರಂತೆ ದಿನಾಂಕ 09/07/2023 ರಂದು 5ನೇ ಆರೋಪಿಯ ವಿಳಾಸಃ ನಂ.82, 30 ನೇ ಕ್ರಾಸ್, ಬಿ.ಟಿ.ಬಿ. ಏರಿಯಾ, ತಿಲಕ್ ನಗರ, ಬೆಂಗಳೂರು ಇಲ್ಲಿಗೆ ಹೋಗಿ 5ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಲಿಲ್ಲ. ಪಂಚರಾದ ಜಾವೇದ್ ಮತ್ತು ವೆಂಕಟೇಶ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ 5ನೇ ಆರೋಪಿಯ ವಿರುದ್ದ ಉದ್ಘೋಷಣೆಯನ್ನು ಘೋಷಿಸಿ ಸದರಿ 5ನೇ ಆರೋಪಿಯು ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಕೆ.ಹೆಚ್.ಬಿ. ಕ್ವಾರ್ಟರ್ಸ್ ಗೋಡೆಗೆ, ವಿದ್ಯುತ್ ಕಂಬಕ್ಕೆ ಮತ್ತು ಬಸ್ ನಿಲ್ದಾಣದ ಗೋಡೆಗೆ

ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಬೆಳಿಗ್ಗೆ 10.30 ಗಂಟೆಯಿಂದ 11.30 ಗಂಟೆಯವರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಆದೇಶ ಮತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಆದೇಶವನ್ನು ನಿಪಿ-1 ಎಂದು, 5ನೇ ಆರೋಪಿಯ ಮೇಲಿನ ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.**

3. ಅದೇ ದಿನ 1ನೇ ಆರೋಪಿಯ ವಿಳಾಸಃ 7 ನೇ ಕ್ರಾಸ್, ಅನ್ವರ್ ಹೋಟೆಲ್ ಹತ್ತಿರ, ಗೋರಿಪಾಳ್ಯ, ಮೈಸೂರು ರಸ್ತೆ, ಬೆಂಗಳೂರು ಇಲ್ಲಿಗೆ ಹೋಗಿ 1ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಲಿಲ್ಲ. ಪಂಚರಾದ ಅಜಯ್ ಮತ್ತು ಅನ್ವರ್ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ 1ನೇ ಆರೋಪಿಯ ವಿರುದ್ಧ ಉದ್ಘೋಷಣೆಯನ್ನು ಘೋಷಿಸಿ ಸದರಿ 1ನೇ ಆರೋಪಿಯು ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ರಾಮದೇವರ ದೇವಸ್ಥಾನದ ಗೋಡೆಗೆ , ವಿದ್ಯುತ್ ಕಂಬಕ್ಕೆ ಮತ್ತು ಗೋರಿಪಾಳ್ಯದ ಬಸ್ ನಿಲ್ದಾಣದ ಗೋಡೆಗೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಮದ್ಯಾಹ್ನ 01.00 ಗಂಟೆಯಿಂದ 02.00 ಗಂಟೆಯವರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **1ನೇ ಆರೋಪಿಯ ಮೇಲಿನ ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.**

4. ಅದೇ ದಿನ 3ನೇ ಆರೋಪಿಯ ವಿಳಾಸಃ ನಂ. 36, ಬಕ್ಷಿ ಗಾರ್ಡನ್ , ವಿನಾಯಕ್ ಟಾಕೀಸ್ ಹಿಂಭಾಗ, ಮೈಸೂರು ರಸ್ತೆ, ಬೆಂಗಳೂರು ಇಲ್ಲಿಗೆ ಹೋಗಿ 3ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಲಿಲ್ಲ. ಪಂಚರಾದ ಸಯ್ಯದ್ ಮುಸ್ತಫಾ ಮತ್ತು ರಘು ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ 3ನೇ ಆರೋಪಿಯ ವಿರುದ್ಧ ಉದ್ಘೋಷಣೆಯನ್ನು ಘೋಷಿಸಿ ಸದರಿ 3ನೇ ಆರೋಪಿಯು ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ವಿನಾಯಕ ಟಾಕೀಸ್ ಗೋಡೆಗೆ , ಮೈಸೂರು ರಸ್ತೆಯ ಫ್ಲೈಓವರ್ ನ ಕಂಬಕ್ಕೆ ಮತ್ತು ವಿದ್ಯುತ್ ಕಂಬಕ್ಕೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಸಂಜೆ 04.00 ಗಂಟೆಯಿಂದ 05.00 ಗಂಟೆಯವರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ 3**ನೇ ಆರೋಪಿಯ ಮೇಲಿನ ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)

ಮು.ಮ.ದಂ.ನ್ಯಾ.ಬೆಂ.ನಗರ.